ಸಿ.ಸಿ..ನಂ.17–2022
ಪಿ.ಡಬ್ಲ್ಯೂ–6

ದಿನಾಂಕ.22–08–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ** ಆರೋಪಿ ಪರ ಶ್ರೀ ಎನ್ ಆರ್ ಎನ್ ವಕೀಲರಿಂದಃ

1. ಮಾಂಸವನ್ನು ವಿಲೇವಾರಿ ಮಾಡಲು ಸದ್ರಿ ಮಾಂಸ ನಿಮ್ಮ ಸುರ್ಪದಿಗೆ ತೆಗೆದುಕೊಂಡು ಎಷ್ಟು ಸಮಯವಾಗಿತ್ತು ಎಂದರೆ ನಾನು ನನ್ನ ಸುಪರ್ದಿಗೆ ತೆಗೆದುಕೊಂಡಿರಲಿಲ್ಲ. ನನ್ನ ಜೊತೆಯಲ್ಲಿದ್ದ ತನಿಖಾಧಿಕಾರಿಗಳು ಸುಪರ್ದಿಗೆ ತೆಗೆದುಕೊಂಡಿದ್ದರು. ದಿಃ 17–8–2020 ರಂದು ಪಂಚರ ಮತ್ತು ತನಿಖಾಧಿಕಾರಿಗಳ ಸಮಕ್ಷಮ ಅದನ್ನು ದಹನ ಮಾತ್ರ ಮಾಡಿರುತ್ತೇವೆ. ಆ ಸಮಯದಲ್ಲಿ ನಾನು ವಲಯ ಅರಣ್ಯಾಧಿಕಾರಿಯಾಗಿದ್ದೆ ಎಂದರೆ ಸರಿ. ಈ ಪ್ರಕರಣದಲ್ಲಿರುವ ಮಾಂಸವನ್ನು ಇಲಾಖೆಯವರು ಸುಪರ್ದಿಗೆ ತೆಗೆದುಕೊಂಡು ಅದನ್ನು ದಹನ ಮಾಡುವವರೆಗೆ ಎಷ್ಟು ಗಂಟೆ ಯಾಗಿತ್ತು ಎಂದರೆ ಅಂದಾಜು ಎರಡೂವರೆ ದಿವಸವಾಗಿತ್ತು. ಸದ್ರಿ ಮಾಂಸ ದಹನ ಮಾಡುವ ಸಮಯದಲ್ಲಿ ನೀರಿನಿಂದ ತೆಗೆದ ಮಾಂಸವಾಗಿತ್ತೊ ಅಥವಾ ಒಣ ಮಾಂಸವಾಗಿತ್ತೊ ಎಂದರೆ ಅದು ಹಸಿ ಕೊಳೆತ ಮಾಂಸವಾಗಿತ್ತು. ಸದ್ರಿ ಮಾಂಸ ಭ್ರೂಣ , ಚರ್ಮ ಹಸಿ ಕೊಳೆತ ಸ್ಥಿತಿಯಲ್ಲಿ ಇತ್ತು ಎಂದು ಪಂಚನಾಮೆಯಲ್ಲಿ ನಮೂದು ಮಾಡಿರುತ್ತೀರಾ ಎಂದರೆ ಅದು ಜಪ್ತು ಮಾಡಿದ ಬಗ್ಗೆ ಹಾಗೂ ನ್ಯಾಯಾಲಯದ ಆದೇಶ ಮಾಡಿದ ಬಗ್ಗೆ ಬರೆದಿರುತ್ತೇವೆ. ಅದು ಕೊಳೆತ ಸ್ಥಿತಿಯಲ್ಲಿ ಇತ್ತು ಎಂದು ಬರೆದಿರುವುದಿಲ್ಲ . ಈ ಮಾಂಸ ಭ್ರೂಣ ಹಾಗೂ ಚರ್ಮ ಕೊಳೆತು ಹೋಗಿರುತ್ತದೆ ಮತ್ತು ವಾಸನೆ ಬರುತ್ತಿರುತ್ತದೆ ಎಂದು ಪಂಚರು ಹೇಳಿರುತ್ತಾರಾ ಎಂದರೆ ಪಂಚರು ಹೇಳಿದ್ದು ಇರುವುದಿಲ್ಲ . ಸಹಜವಾಗಿ ಎರಡೂವರೆ ದಿವಸವಾದರೆ ಸದ್ರಿ ಮಾಂಸ ವು ಭ್ರೂಣ, ಚರ್ಮ, ಕಾಲು, ಕೊಳೆತು ಹೋಗುತ್ತದೆ . ಪಂಚನಾಮೆಯನ್ನು ಪಂಚರ ಹೇಳಿಕೆ ಪ್ರಕಾರ ಬರೆಯಲಾಗಿರುತ್ತದೆ. ಮೇಲೆ ಹೇಳಿದ ಮಾಂಸ ಭ್ರೂಣ, ಚರ್ಮ, ಕಾಲು ಪಂಚರಿಗೆ ತೋರಿಸಲಾಗಿರುತ್ತದೆ ,. ಸಾಮಾನ್ಯವಾಗಿ ಎರಡು ದಿನಗಳು ಕಳೆದರೆ ಆ ಮಾಂಸಕ್ಕೆ ಭ್ರೂಣ , ಚರ್ಮ, ಕಾಲು, ಕೊಳೆತು ಹುಳಗಳು ಕೂಡ ಆಗುತ್ತದೆ ಮತ್ತು ನೀರಿನಿಂದ ಕೂಡಿರುತ್ತದೆ ಎಂದರೆ ಸರಿ . ಪಂಚನಾಮೆಯನ್ನು ಮಾಡಿದ್ದು ಹಾಗೂ ಸದ್ರಿ ವಸ್ತುಗಳನ್ನು ಸುಟ್ಟಿದ್ದು ವಲಯ ಕಚೇರಿಯ

ಆವರಣದಲ್ಲಿ ಮಾಡಿರುತ್ತೇವೆ . ನಮ್ಮ ಕಚೇರಿಯಲ್ಲಿನ ಸುರ್ಪದಿಗೆ ಪಡೆಯುತ್ತೇವೆ ಎನ್ನುವಂತಹ ಎಲ್ಲಾ ವಸ್ತುಗಳನ್ನು ವಿಲೇವಾರಿ ಮಾಡಿರುತ್ತೇವೆ ಎಂದು ತೋರಿಸಿರುವ ಸ್ಥಳ ಇದೆ ಆಗಿರುತ್ತದೆ ಎಂದರೆ ಬೇರೆ ಬೇರೆ ಸ್ಥಳ ಕೂಡ ಆಗಿರುತ್ತದೆ. ನಾನು ವಲಯ ಅರಣ್ಯಾಧಿಕಾರಿಯಾಗಿದ್ದಾಗ ಬೇರೆ ಪ್ರಕರಣದಲ್ಲಿ ಎಲ್ಲೆಲ್ಲಿ ವಿಲೇವಾರಿ ಮಾಡಿರುತ್ತೀರಿ ಎಂದರೆ ಎಲ್ಲೆಲ್ಲಿ ಇಲಾಖಾ ಆವರಣಗಳು ಇರುತ್ತವೆಯೊ ಅಲ್ಲಿ ಮಾಡಲಾಗಿರುತ್ತದೆ . ಭ್ರೂಣ, ಚರ್ಮ, ಕಾಲು ಮಾಂಸ ಇವುಗಳನ್ನು ನಾನು FSL ಕಳುಹಿಸುವುದಕ್ಕೆ ಶ್ಯಾಂಪಲ್ ತೆಗೆದುಕೊಂಡಿರುವುದಿಲ್ಲ . ಅದನ್ನು ತನಿಖಾಧಿಕಾರಿಗಳು ಶ್ಯಾಂಪಲ್ ವನ್ನು ಪಡೆದುಕೊಳ್ಳುವ ಸಮಯದಲ್ಲಿ ಹಾಗೂ ರಾಸಾಯನಿಕ ವಿಧಿ ವಿಜ್ಞಾನ ಇಲಾಖೆಯ ಕಳುಹಿಸುವ ಸಮಯದಲ್ಲಿ ಪಂಚನಾಮೆಯ ಕಾಲಕ್ಕೆ ನಾನು ಇದ್ದೆ. ಸತ್ತ ಕಡವೆಯ ಮಾಂಸ , ಚರ್ಮ, ಕಾಲು, ಭ್ರೂಣ ಇವುಗಳನ್ನು ವಶಪಕ್ಕೆ ಪಡೆದುಕೊಂಡಾಗ ಆ ವಶಕ್ಕೆ ಪಡೆದುಕೊಂಡ ಪ್ರಾಣಿಯ ದೇಹದ ಎಲ್ಲಾ ಬಿಡಿ ಭಾಗಗಳ ಶ್ಯಾಂಪಲ್ ಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದರೆ ಈ ಪ್ರಕರಣದಲ್ಲಿ ತನಿಖಾಧಿಕಾರಿಗಳು ಆ ಬಗ್ಗೆ ನಿರ್ಧಾರ ತೆಗೆದುಕೊಂಡಿರುತ್ತಾರೆ. ಈ ಪ್ರಕರಣ ದಾಖಲಾಗಿದೆ ಎಂಬ ದಿನಾಂಕದಂದು ಅಂಕೋಲಾ ವಲಯ ಅರಣ್ಯಾಧಿಕಾರಿಯಾಗಿ ನಾನು ಕರ್ತವ್ಯ ನಿರ್ವಹಿಸುತ್ತಿದ್ದೆ. ಮಾಂಸ , ಚರ್ಮ ಕಾಲು, ಭ್ರೂಣ ಇವುಗಳನ್ನು ವಿಲೇವಾರಿ ಮಾಡುವ ಕಾಲಕ್ಕೆ ನಿಮ್ಮ ಇಲಾಖೆಯ ಶೀಲು ಹಾಕಿ ಪ್ಯಾಕ್ ಮಾಡಿ intact ಆದ ಸ್ಥಿತಿಯಲ್ಲಿ ಇತ್ತೊ ಅಥವಾ ಹಾಗೆ ಇತ್ತೊ ಎಂದರೆ ಶೀಲನ್ನು intact ಮಾಡಲಾಗಿತ್ತು. ಈ ಮೇಲೆ ಹೇಳಿದ ವಸ್ತುಗಳು ತನಿಖಾಧಿಕಾರಿಯ ಶೀಲನ್ನು ಹಾಕಿ intact ಮಾಡಲಾಗಿತ್ತು . ಅವರು ಯಾರೆಂದರೆ ACF ಆಗಿದ್ದರು . ಸ್ವದ್ರಿ ಮುದ್ದೆಮಾಲುಗಳನ್ನು ಪ್ಲಾಸ್ಟಿಕ ಚೀಲದಲ್ಲಿ ಸುತ್ತಿ ಶೀಲನ್ನು ಹಾಕಿ intact ಮಾಡಲಾಗಿತ್ತು . ಸ್ವದ್ರಿ ಮುದ್ದೆಮಾಲುಗಳನ್ನು ಯಾವ ದಿನಾಕಂದಂದು ಶೀಲು ಮತ್ತು ಸಹಿ ಹಾಕಿ intact ಮಾಡಲಾಗಿತ್ತು ಎಂದರೆ ದಿಃ 14-8-2020 ರಲ್ಲಿ ಮಾಡಲಾಗಿತ್ತು. ದಿಃ 14-8-2020 ರಂದು ಸ್ವದ್ರಿ ಜಪ್ತಿ ಪಡಿಸಿಕೊಂಡ ಮುದ್ದೆಮಾಲುಗಳು ಯಾವ ರೀತಿ intact ಆಗಿತ್ತೊ ಅದೇ ರೀತಿ ವಿಲೇವಾರಿ ಮಾಡುವ ಸಮಯದಲ್ಲಿ ಕೂಡ ಆಗಿತ್ತು . ದಿಃ 14-8-2020 ರಂದು ವಲಯ ಅರಣ್ಯಾಧಿಕಾರಿಯಾಗಿ ಆ ದಿನ ನೀವು ಇದ್ದಿದ್ದರಿಂದ ನಿಮ್ಮ ಮುಂದೆ ಸ್ವದ್ರಿ ಮುದ್ದೆ ಮಾಲುಗಳನ್ನು ಮತ್ತು ಆರೋಪಿತರನ್ನು ಹಾಜರುಪಡಿಸಲಾಗಿತ್ತಾ ಎಂದರೆ ತನಿಖಾಧಿಕಾರಿ ACF ರವರ ಮುಂದೆ ಹಾಜರು ಪಡಿಸಲಾಗಿತ್ತು. ಸ್ವದ್ರಿ

ಮುದ್ದೆಮಾಲುಗಳನ್ನು ಮತ್ತು ಆರೋಪಿತರನ್ನು ACF ರವರ ಮುಂದೆ ಎಷ್ಟು ಗಂಟೆಗೆ ಹಾಜರು ಪಡಿಸಿರುತ್ತಾರೆ ಎಂದರೆ ನಿಖರವಾಗಿ ಸಮಯ ಹೇಳಲು ಆಗುವುದಿಲ್ಲ. ಸಂಜೆಯ ಸಮಯದಲ್ಲಿ ಹಾಜರು ಪಡಿಸಿರುತ್ತಾರೆ. ಸಂಜೆ ಎಂದರೆ 5-00 ಗಂಟೆಯ ನಂತರ ಹಾಜರು ಪಡಿಸಿರುತ್ತಾರೆ. ಆ ದಿನ ಮುದ್ದೆಮಾಲುಗಳನ್ನು ಮತ್ತು ಆರೊಪಿತರನ್ನು ವಲಯ ಕಚೇರಿಗೆ ಹಾಜರು ಪಡಿಸಿದ ಬಗ್ಗೆ ನನಗೆ ಸ್ವತಃ ಮಾಹಿತಿ ಇಲ್ಲ ಎಂದರೆ ನನ್ನ ಸಮಕ್ಷಮ ಹಾಜರು ಪಡಿಸಿದ ಬಗ್ಗೆ ಮಾಹಿತಿ ಇಲ್ಲ . ಆದರೆ ತನಿಖಾಧಿಕಾರಿ ಮುಂದೆ ಹಾಜರ ಪಡಿಸಿದ ಬಗ್ಗೆ ಮಾಹಿತಿ ಇರುತ್ತದೆ . ತನಿಖಾಧಿಕಾರಿ ಮುಂದೆ ಹಾಜರು ಪಡಿಸಿದ ಬಗ್ಗೆ ನಾನು ಸ್ವತಃ ಕಣ್ಣಲ್ಲಿ ನೋಡಿಲ್ಲ. ಅದನ್ನು ಹಾಜರು ಪಡಿಸಿದ ನಂತರದಲ್ಲಿ ನೋಡಿರುತ್ತೇನೆ. ನೀವು ತನಿಖಾಧಿಕಾರಿ ಮುಂದೆ ಆರೋಪಿತರನ್ನು ಮುದ್ದೆಮಾಲುಗಳನ್ನು ಹಾಜರು ಪಡಿಸಿದ ಬಗ್ಗೆ ಸ್ವತಃ ನೋಡಿಲ್ಲ ಅದನ್ನು ಕೇಳಿ ತಿಳಿದುಕೊಂಡಿರುತ್ತಿರಿ ಎಂದರೆ ಸರಿ. ಸದ್ರಿ ಜಪ್ತು ಪಡಿಸಿಕೊಳ್ಳಲಾದ ಮುದ್ದೆಮಾಲುಗಳು ಕೊಳೆತ ಸ್ಥಿತಿಯಲ್ಲಿ ಇತ್ತು ಮತ್ತು ಹುಳುಗಳು ಆಗಿದ್ದವು ಎಂದು ಪಂಚನಾಮೆಯಲ್ಲಿ ನಿಮಗೆ ಬರೆಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ಆ ದಿನ ನೀವು ಜಪ್ತು ಪಡಿಸಿಕೊಂಡ ಮುದ್ದೆ ಮಾಲುಗಳನ್ನು ವಿಲೇವಾರಿ ಮತ್ತು ದಹನ ಮಾಡಿದವರು ಅಲ್ಲ ಅದನ್ನು ನಿಮ್ಮ ಮೇಲಾಧಿಕಾರಿಗಳ ಆದೇಶದ ಮೇರೆಗೆ ಮುದ್ದೆಮಾಲುಗಳನ್ನು ವಿಲೇವಾರಿ ಮತ್ತು ದಹನ ಮಾಡಿದವರು ಎಂದು ಔಪಚಾರಿಕವಾಗಿ ಕಾಣಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ . ನಾನು ಬೆಳಿಗ್ಗೆ 10-00 ಯಿಂದ 11-00 ರವರೆಗೆ ಚಾಸಾ 2 ಮತ್ತು 3 ರ ಸಮಕ್ಷಮ ಮುದ್ದೆಮಾಲುಗಳನ್ನು ವಿಲೇವಾರಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . intact ಆದ ಮುದ್ದೆ ಮಾಲುಗಳ ಮೇಲೆ ಪಂಚರ ಸಹಿಗಳು ಇತ್ತಾ ಎಂದರೆ ಹೌದು . ದಿಃ 14-8-2020 ಅಂದರೆ ಮುದ್ದೆಮಾಲುಗಳನ್ನು ಜಪ್ತು ಪಡಿಸಿಕೊಂಡ ದಿನದಿಂದ ವಿಲೇವಾರಿ ಆಗುವವರೆಗೆ ಸದ್ರಿ ಮುದ್ದೆಮಾಲುಗಳನ್ನು ತೆಗೆದದ್ದು ಇಲ್ಲ. ವಿಲೇವಾರಿ ಮಾಡುವ ದಿನ ಎಷ್ಟು ಗಂಟೆಗೆ ಅದನ್ನು ಬಿಡಿಸಿ ನೋಡಿರುತ್ತೀರಿ ಎಂದರೆ ಬೆಳಿಗ್ಗೆ 10-00 ಬಿಡಿಸಿ ನೋಡಿರುತ್ತೇವೆ. ಪಂಚನಾಮೆ ಪ್ರಕ್ರಿಯೆ ಪ್ರಾರಂಭವಾದ ಬೆಳಿಗ್ಗೆ 10-00 ಸಮಯದಲ್ಲಿ ಅಂದರೆ ಬೆಳಿಗ್ಗೆ 10-00 ಗಂಟೆಗೆ ತೆಗೆದು ನೋಡಿರುತ್ತೇವೆ. ದಹನದ ಪ್ರಕ್ರಿಯೆಯ ಬೆಳಿಗ್ಗೆ 11-30 ಮುಗಿಸಿರುತ್ತೇನೆ. ದಹನ ಪ್ರಕ್ರಿಯೆ ಬೆಳಿಗ್ಗೆ 10-00 ರಿಂದ 11-30 ರವರೆಗೆ ಮುಗಿದಿರುತ್ತದೆ ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ . ಅಂದರೆ

ಪಂಚನಾಮೆ ಪ್ರಕ್ರಿಯೇ ಬೆಳಿಗ್ಗೆ 10-00 ರಿಂದ 11-30 ಎಂದು ಬರೆದಿರುತ್ತೇವೆ ಆದರೆ ದಹನ ಪ್ರಕ್ರಿಯೆ ಎಂದು ಬರೆದಿರುವುದಿಲ್ಲ . ಬೆಳಿಗ್ಗೆ 10-00 ರಿಂದ 11-30 ರವರೆಗೆ ದಹನ ಪ್ರಕ್ರಿಯೆ ಮುಗಿಯುವವರೆಗೂ ಪಂಚನಾಮೆ ಬರೆಯಲು ಕಾಯುತ್ತಿದ್ದೀರಾ ಎಂದರೆ ಅದು ಪೂರ್ತಿ ಸುಡುವ ವರೆಗೆ ಕಾಯ ಬೇಕಾಗುತ್ತದೆ . ಪೂರ್ತಿ ಸುಡುವ ಪ್ರಕ್ರಿಯೇ ಹೊರತು ಪಡಿಸಿ ಇನ್ನೂಳಿದ ಅಂಶಗಳನ್ನು ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಮುಗಿಸಿರುತ್ತೀರಿ ಎಂದರೆ ಎಲ್ಲಾ ಪ್ರಕ್ರಿಯೆಯನ್ನು ಬೆಳಿಗ್ಗೆ 10-00 ರಿಂದ 11-30 ರ ಪ್ರಕ್ರಿಯೇ ಬರೆದು ಮುಗಿಸಲಾಗಿರುತ್ತದೆ . ಪಂಚನಾಮೆ ಎಷ್ಟು ಪುಟದಲ್ಲಿ ಇರುತ್ತದೆ ಎಂದು ನನಗೇ ನೆನಪಿಲ್ಲ . ಪಂಚನಾಮೆ ಬರೆಯಲು ಒಂದೂವರೇ ಗಂಟೆ ಕಾಲ ಬೇಕಾಗುವುದಿಲ್ಲ ಎಂದರೆ ಪ್ರಕ್ರಿಯೇ ಮುಗಿಯುವರೆಗೂ ಬರೆಯಲು ಆಗುವುದಿಲ್ಲ. ಪ್ರತಿಯೊಂದು ಪ್ರಕ್ರಿಯೆಯನ್ನು ಅಂದರೆ ಯಾವ ಬಿಡಿ ಭಾಗಳು ಯಾವ ಸಮಯದಲ್ಲಿ ಸುಡುತ್ತಾ ಹೋಗುತ್ತವೆ ಎಂದು ಬರೆದಿರುತ್ತೀರಾ ಎಂದರೆ ಅಷ್ಟು ಜಪ್ತು ಪಡಿಸಲಾದ ಮುದ್ದೆಮಾಲುಗಳನ್ನು ಒಂದೇ ಕಡೆ ಹಾಕಿ ಸುಡುತ್ತಾ ಹೋಗಿರುತ್ತೇವೆ .

2. ಪಂಚನಾಮೆ ಮಾಡಿದ ದಿಃ 17-08-2020 ಆಗಿರುತ್ತದೆ . ದಿಃ 17-8-2020 ರಂದು ಪಂಚನಾಮೆ ತೆಗೆದೆ , ವಿಡಿಯೋ ತೆಗೆದೆ ಎಂದು ಹೇಳಿರುತ್ತೀರಿ . ನ್ಯಾಯಾಲಯದ ಮುಂದೆ ಹಾಜರ ಪಡಿಸಿದ ಸಿಡಿ ಎಷ್ಟು ಗಂಟೆ ಕಾಲ ಗಳ ರನ್ ಆಗಿದೆ ಎಂದರೆ ನಾನು ಅಲ್ಲಿ ಸಾಕ್ಷಿದಾರನಾಗಿರುತ್ತೇನೆ . ಪಂಚರನ್ನು ಸಿಬ್ಬಂದಿಗಳನ್ನು ತನಿಖಾಧಿಕಾರಿಗಳು ನೇಮಿಸಿಕೊಂಡಿದ್ದರು . ಸಿಡಿ ಎಷ್ಟು ಗಂಟೆ ಕಾಲ ರನ್ ಅಗಿದೆ ಎಂದು ನನಗೆ ನೆನಪಿಲ್ಲ . ಹಿಂದೆ ಇಷ್ಟು ಸಮಯದ ವರೆಗೆ ಸಿಡಿ ರನ್ ಆಗಿದೆ ಎಂದು ತೋರಿಸಿ ನಂತರದಲ್ಲಿ ಮುಂದಿನ ತನಿಖೆಯ ಬಗ್ಗೆ ಸಿಡಿಯನ್ನು ರನ್ ಮಾಡಲಾಗಿರುತ್ತದೆ ಎಂದು ಪಂಚರ ಸಮಕ್ಷಮ ದಲ್ಲಿ ತೋರಿಸಿ ಸಿಡಿ ಮಾಡಲಾಗಿರುತ್ತದಾ ಎಂದರೆ ಪಂಚನಾಮೆ ಮಾಡುವ ಕಾಲಕ್ಕೆ ಸಿಡಿ ಬಂದಿರಲಿಲ್ಲ. ಮೊಬೈಲ್ ತೆಗೆದುಕೊಂಡು ವಿಡಿಯೋ ಮಾಡಿರುತ್ತೇವೆ. ಸದ್ರಿ ಮೊಬೈಲ ವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಬೇಕು ಎಂಬ ಕಾರಣದಿಂದ ತನಿಖಾಧಿಕಾರಿಗಳು ಪಂಚರ ಸಮಕ್ಷಮ ಮುತ್ತು ನಿಮ್ಮ ಸಮಕ್ಷಮ ಪಂಚನಾಮೆ ಮಾಡಿ ಅದನ್ನು ಜಪ್ತು ಪಡಿಸಿಕೊಂಡಿರುತ್ತಾರಾ ಎಂದರೆ ಇಲ್ಲ. ಮೊಬೈಲ್‌ನ ಕಂಪನಿಯನ್ನು ಮತ್ತು ಅದರ AMI ನಂಬರವನ್ನು ಪಂಚನಾಮೆಯಲ್ಲಿ ಬರೆಯಲಾಗಿರುತ್ತದಾ ಎಂದರೆ ಮೊಬೈಲ್‌ದಲ್ಲಿ ವಿಡಿಯೋ ಮಾಡಲಾಗಿರುತ್ತದೆ ಎಂದು

ಬರೆಯಲಾಗಿರುತ್ತದೆ . ಅದು ಯಾವ ಸಿಬ್ಬಂದಿಗೆ ಸೇರಿದ ಮೊಬೈಲ್ ಆಗಿತ್ತು ಅದರ ಕಂಪನಿಯ ಹೆಸರು ಆ ಸೆಟ್ ನಂಬರ ವನ್ನು ಪಂಚನಾಮೆ ಯಲ್ಲಿ ಬರೆಯಲಾಗಿಲ್ಲ ಎಂದರೆ ಸಿಬ್ಬಂದಿ ಗಳ ಮೊಬೈಲ ಎಂದು ಬರೆದಿರುತ್ತಾರೇ ಸಿಬ್ಬಂದಿ ಯಾರು ಎಂದು ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿ .ನಿಪಿ-21 ಮತ್ತು 25 ಪೊಟೊ ಮತ್ತು ವಿಡಿಯೊ ತೆಗೆದಿರುತ್ತಾರೆ ಎಂದು ನಾನು ಸುಳ್ಳಿನಿಂದ ಹೇಳುತ್ತಿದ್ದು ಮತ್ತು ಸದ್ರಿ ಜಪ್ತು ಪಡಿಸಿಕೊಳ್ಳಲಾದ ಮುದ್ದೆಮಾಲುಗಳನ್ನು ವಿಲೇವಾರಿ ಮಾಡುವ ಕಾಲಕ್ಕೆ ನಾನು ಹಾಜರು ಇರಲಿಲ್ಲ ಎಂದರೆ ಸರಿಯಲ್ಲ . ನಿಪಿ-21 ರಿಂದ ರಿಂದ 25 ರ ದಾಖಲಾತಿಗಳು ನಿಮ್ಮ ಮೇಲಾಧಿಕಾರಿಗಳು ಸೃಷ್ಟಿಸಿದ ದಾಖಾಲಾತಿಯಾಗಿದ್ದು ಈ ಪ್ರಕರಣಕ್ಕೆ ಪೂರಕವಾಗುವಂತೆ ಸೃಷ್ಟಿಸಿದ ದಾಖಲಾತಿಯಾಗಿದ್ದು ನೀವು ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ .ಎಲ್ಲಾ intact ಆಗಿರುವ ಜಪ್ತು ಪಡಿಸಿಕೊಂಡೆ ಎನ್ನಲಾಗಿರುವ ಮುದ್ದೆಮಾಲುಗಳನ್ನು ಬಿಚ್ಚಿದಾಗ ಅದರ ಬಗ್ಗೆ ಪಂಚನಾಮೆ ಮಾಡಿರುವುದಿಲ್ಲ. ಸಾಕ್ಷಿ ಪುನಃ ಮುಂದುವರೆದು intact ಅಗಿರುವ ಮುದ್ದೆ ಮಾಲುಗಳನ್ನು ಪಂಚರು ನೋಡಿರುತ್ತಾರೆ ನಿಮ್ಮ ಸಮಕ್ಷಮ ಮತ್ತು ಪಂಚರ ಸಮಕ್ಷಮ ಮುದ್ದೆಮಾಲುಗಳನ್ನು ವಿಲೆವಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ .

3. ಜಿಲ್ಲಾ ಸಶಸ್ತ್ರ ಪಡೆಯವರು ಗನ ವನ್ನು ಅನಲೋಡ ಮಾಡಲು ನಿಯುಕ್ತಿ ಮಾಡಲಾದ ಬಗ್ಗೆ ದಾಖಲಾತಿ ಯನ್ನು ತನಿಖಾಧಿಕಾರಿಗಳಿಗೆ ನೀಡಿದ್ದಾರಾ ಎಂದರೆ ನೀಡಿರುತ್ತಾರೆ. ಸಾಕ್ಷಿ ಪುನಃ ಮುಂದುವರೆದು ತನಿಖಾಧಿಕಾರಿಗಳು ಜಿಲ್ಲಾ ಸಶಸ್ತ್ರ ಪಡೆಯವರಿಗೆ ಗನ ವನ್ನು ಅನ್ ಲೋಡ ಮಾಡಿಸಿ ಎಂದು ಪತ್ರ ಬರೆಸಿ ಅಲ್ಲಿಂದ ನೇಮಕ ಆಗಿದ್ದರ ಬಗ್ಗೆ ಪಂಚರ ಸಮಕ್ಷಮ ತಿಳಿಸಿ ಹೇಳಿರುತ್ತಾರೆ. ಸಶಸ್ತ್ರ ಪಡೆಯವರು ಬಂದಿದ್ದರು ಮತ್ತು ಗನ ವನ್ನು ಅನ್ ಲೋಡ ಮಾಡಲು ಅವರನ್ನು ನಿಯುಕ್ತಿ ಮಾಡಲಾಗಿತ್ತು ಎಂದು ಪಂಚನಾಮೆಯಲ್ಲಿ ಬರೆಯಲಾಗಿರುತ್ತದೆ . ಸಶಸ್ತ್ರ ಮೀಸಲು ಪಡೆಯವರು ಈ ಪ್ರಕರಣದಲ್ಲಿ ನಿಯುಕ್ತಿ ಗೊಂಡ ಬಗ್ಗೆ ದಾಖಲಾತಿಯನ್ನು ನಾನು ನೋಡಿರುತ್ತೇನೆ. ಆ ರೀತಿಯಾದ ಯಾವುದೇ ಸಿಬ್ಬಂದಿಗಳನ್ನು ನಿಯುಕ್ತಿ ಮಾಡಿದ್ದ ಬಗ್ಗೆ ದಾಖಲಾತಿಗಳು ಇಲ್ಲ ಎಂದರೆ ಸರಿಯಲ್ಲ . ಅನಲೋಡ ಮಾಡಿದಂತಹ ಗುಂಡುಗಳು ನ್ಯಾಯಾಲಯದ ಮುಂದೆ ಇಲ್ಲದೆ ಇರುವುದರಿಂದ ಈ ಎಲ್ಲಾ ವಿಷಯಗಳನ್ನು ಸುಳ್ಳಾಗಿ ಹೇಳುತ್ತಿದ್ದಿಃರಿ ಎಂದರೆ ಸರಿಯಲ್ಲ . ಗನ ವನ್ನು ಅನ್ ಲೊಡ ಮಾಡಿದ್ದ ಬಗ್ಗೆ ಸಹ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ

. ನೀವು ಹೇಳುವ ಪ್ರಕಾರ 5 ಗ್ರಾಂ ದಷ್ಟು ಗನ ಪೌಡರ ಹಾಗೂ ಸೀಸದ ತುಂಡುಗಳನ್ನು ಹೊರತು ಪಡಿಸಿ ಇನ್ನೂ ಯಾವುದೇ ದಾಖಲಾತಿಗಳನ್ನು ನೀವು ನೊಡೀಲ್ಲ ಎಂದರೆ ಸರಿಯಲ್ಲ . ಗನ ನಿಂದ ತೆಗೆದ ಬೇರೆ ಯಾವುದಾದರೂ ವಸ್ತುಗಳನ್ನು ಸಿಬ್ಬಂದಿಗಳು ತೆಗೆದಿರುವ ಬಗ್ಗೆ ನೀವು ನೋಡಿರುತ್ತೀರಾ ಎಂದರೆ ಇಲ್ಲ .

4. ನಾಡ ಬಂದೂಕಿನಲ್ಲಿ 5 ಗ್ರಾಂ ದಷ್ಟು ಗನ ಪೌಡರ ಹಾಗೂ ಕೇವಲ ಗುಂಡುಗಳನ್ನು ಮಾತ್ರ ಉಪಯೋಗಿಸಿ ಬಂದೂಕನ್ನು ಲೋಡ ಮಾಡಲು ಬರುವುದಿಲ್ಲ ಎಂದರೆ ಸರಿ . ಬಂದೂಕು ಲೋಡ ಆಗಿರುತ್ತದೆ ಯಾವ ಆಧಾರದಲ್ಲಿ ತಿಳಿದುಕೊಂಡಿರುತ್ತೀರಿ ಮತ್ತು ತನಿಖಾಧಿಕಾರಿಗಳು ಗನ ವನ್ನು ತೋರಿಸಿರುತ್ತಾರಾ ಎಂದರೆ ತನಿಖಾಧಿಕಾರಿಗಳು ಗನ ವನ್ನು ತೋರಿಸಿರುತ್ತಾರೆ ಮತ್ತು ತನಿಖಾಧಿಕಾರಿಗಳು ಗನ ಲೋಡ ಆಗಿದೆ ಎಂದು ಹೇಳಿರುತ್ತಾರೆ ಮತುತ ಇನ್ನೂ ಸ್ವಲ್ಪ ಕ್ಷಣ ದಲ್ಲಿ ಗನ್ ಲೋಡ ಅಗಿದೆಯೋ ಅಥವಾ ಇಲ್ಲವೊ ಎಂದು ಶಸ್ತ್ರ ಪಡೆಯವರು ಬಂದ ನಂತರ ಗೊತ್ತಾಗುತ್ತದೆ ಎಂದು ಹೇಳಿರುತ್ತಾರೆ . ಸಶಸ್ತ್ರ ಪಡೆಯವರು ಬರುವವರಗೆಗೂ ನಿಮಗೆ ಗನ ಲೋಡ ಆಗಿದೆಯೋ ಅನ ಲೋಡ ಆಗಿದೆಯೋಗ ಗೊತ್ತಾಗಿರಲಿಲ್ಲ ಅಂದರೆ ಅದನ್ನು ತಿಳಿದುಕೊಳ್ಳುವ ವಿಶೇಷ ಜ್ಞಾನ ಪರಿಣಿತಿ ನಾನು ಪಡೆದುಕೊಂಡಿಲ್ಲ . ಸಶಸ್ತ್ರ ಮೀಸಲಾತಿ ಪಡೆಯವರು ಗನ ವನ್ನು ತಂದು ಅನ ಲೋಡ ಮಾಡಿ ತೋರಿಸಿದ್ದಾರೆ ಎನ್ನುವವರೆಗೂ ನಿಮಗೆ , ಪಂಚರಿಗೆ ಹಾಗೂ ತನಿಖಾಧಿಕಾರಿಯವರಿಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ತನಿಖಾಧಿಕಾರಿ ಯವರಿಗೆ ಬೇರೆ ಮೂಲ ದಿಂದ ಗೊತ್ತಾಗಿರಬಹುದು . ಹಾಗಾದರೆ ತನಿಖಾಧಿಕಾರಿಗಳು ಈ ಗನ ವನ್ನು ಲೋಡ ಆಗಿರುತ್ತದೆ ಎಂದು ಯಾವ ಮೂಲ ದಿಂದ ತಿಳಿದುಕೊಂಡಿರುತ್ತೇನೆ ಎಂದು ತಿಳಿಸಿರುತ್ತಾರಾ ಎಂದರೆ ಇಲ್ಲ . ನ್ಯಾಯಾಲಯದ ಮುಂದೆ ಇರುವ ಗನ ವನ್ನುತೋರಿಸಿ ಗನಿನ ಮುಂಭಾಗದ ನಳಿಕೆ ಯನ್ನು ತೋರಿಸಿ ಅದರಲ್ಲಿ ಗನ ಲೋಡ ಅಗಿದೆಯೋ ಅನಲೋಡ ಆಗಿದೆಯೊ ಇಲ್ಲವೊ ಎಂದು ಗೊತ್ತಾಗುವುದಿಲ್ಲ ಎಂದರೆ ಅದು ಉಪಯೋಗಿಸುತ್ತಾ ಇದ್ದಲ್ಲಿ ಅದು ಲೋಡ ಆಗಿರುತ್ತದೆಯೋ ಇಲ್ಲವೊ ಎಂದು ಗನ ಪೌಡರ ತಾಗಿದ್ದರ ಮೇಲೆ ಹೇಳಬಹುದು . ಸದ್ರಿ ನ್ಯಾಯಲಾಯದ ಮುಂದೆ ಇರುವ ಗನ ಉಪಯೊಾಗಿಸದೇ ಹಾಗೆ ಇರುವುದರಿಂದ ಆ ಗನ ಲೋಡ ಆಗಿದೆಯೋ ಇಲ್ಲವೊ ಎಂದು ಈಗ ಹೇಳಲು ಆಗುವುದಿಲ್ಲ . ಆ ದಿನ ಷದ್ರಿ ಗನ ನಲ್ಲಿ ಮದ್ದು ಮತ್ತು ಗುಂಡುಗಳು ಲೋಡ ಆಗಿರುತ್ತದ ಎಂದು ಸಶಸ್ತ್ರ ಪಡೆಯವರು ಬರುವ ಪೂರ್ವದಲಿಲ ಊಹೆ

ಮಾಡಿಕೊಂಡಿದ್ದೆವು . ಸದ್ರಿ ಗನ ವನ್ನು ಅನ್ ಲೋಡ ಮಾಡಲು ಸಶಸ್ತ್ರ ಪಡೆಯ ಮೀಸಲು ಅಧಿಕಾರಿಗಳನ್ನು ಕರೆಸಿದ್ದೆವು . ಸದ್ರಿ ನ್ಯಾಯಾಲಯದ ಮುಂದೆ ಇರುವ ಗನ ಗೆ ಗನ್ ಪೌಡರ ಹಾಕಿ ಮದ್ದು ಗುಂಡುಗಳನ್ನು ಹಾಕಿ ಆ ಗನಿನ ನಳಿಕೆ ಯನ್ನು ಕೆಳಮುಖ ಮಾಡಿ ಹಿಡಿದಾಗ ಅದರ ಗನ ಪೌಡರ ಮತ್ತು ಮದ್ದು ಗುಂಡು ಗಳು ಬಿದ್ದು ಹೋಗುತ್ತವೆ ಎಂದರೆ ಸರಿಯಲ್ಲ . ಅದು ಯಾವ ರೀತಿಯಾಗಿ ಲೋಡ ಮಾಡಿರುತ್ತಾರೆ ಅದನ್ನು ಅವಲಂಬಿಸಿರುತ್ತದೆ . ಸದ್ರಿ ಮದ್ದು ಗುಂಡುಗಳು ಬೀಳದೆ ಹಾಗೆ ಇರಲು ಏನು ಮಾಡಿದ್ದರು ಎಂದರೆ ಸದ್ರಿ ಗನ ಯಾವ ರೀತಿಯಾಗಿ ಲಾಕ್ ಆಗುತ್ತದೆ ಎಂಬ ಬಗ್ಗೆ ನನಗೆ ಜ್ಞಾನ ಇರುವುದಿಲ್ಲ . ಶಸ್ತ್ರ ಪಡೆಯವರು ಗನಿನ ಮೂರು ಭಾಗಗಳನ್ನು ಬಿಡಿಸಿ ತೋರಿಸಿ ನಂತರದಲ್ಲಿ ಅದನ್ನು ಜೋಡಿಸಿರುತ್ತಾರೆ . ಗನಿನ ನಳಿಕೆ ಹಾಗೂ ಕೆಳಗಿನ ಭಾಗ ಮತ್ತು ಇನ್ನೊಂದು ಕೊನೆಯ ಭಾಗವನ್ನು ತೆಗೆದು ತೋರಿಸಿದಾಗ ಮದ್ದು ಗುಂಡು ಗಳು ಗನ ಒಳಗೆ ಇದ್ದವು . ಈ ಮೂರು ಭಾಗಗಳನ್ನುತೆಗೆದು ತೋರಿಸಿದಾಗ ಮದ್ದು ಗುಂಡುಗಳು ಹೊರಗೆ ಬಂದಿರುತ್ತದೆ . ನೀವು ಹೇಳಿದಂತೆ ನಾಡ ಬಂದೂಕುಗಳ ಮೂರು ಭಾಗಗಳನ್ನು ತೆಗದು ತೋರಿಸಿದಾಗ ಮದ್ದು ಗುಂಡು ಗಳು ಹೊರಗೆ ಬರುವುದಿಲ್ಲ ಎಂದರೆ ಸರಿಯಲ್ಲ . ಮದ್ದು ಗುಂಡುಗಳನ್ನು ಮತ್ತು ನಾಡ ಬಂದೂಕನ್ನು ವಶ ಪಡಿಸಿಕೊಳ್ಳಲಾಯಿತು ಎಂದು ಸುಳ್ಳಾಗಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ . ಅದೇ ರೀತಿ ಸದ್ರಿ ಗನವನ್ನು 3 ಭಾಗ ಮಾಡಿದಾಗ ಮದ್ದು ಗುಂಡುಗಳು ಹೊರ ಬಂದವು ಎಂದು ಸುಳ್ಳಾಗಿ ಹೇಳುತ್ತಿದ್ದೀರಿ ಎಂರೆ ಸರಿಯಲ್ಲ . ನೀವು ಹೇಳುವಂತಹ ಮೆಥವನ್ನು DBBL ಗನ ದಲ್ಲಿ ಮಾತ್ರ 3 ಭಾಗಗಳಾಗಿ ಮಾಡಿ ಅದರಿಂದ ಕಾರಟ್ರೆಜ್ ಗಳನ್ನು ಹೊರತೆಗೆಯಬಹುದು ಎಂದರೆ ಸರಿಯಲ್ಲ . DBML ಗನ ಗಳಲ್ಲಿ ನೀವು ಹೇಳಿದಂತೆ ಮೂರು ಭಾಗಗಳಾಗಿ ಮಾಡಿ ಮದ್ದು ಗುಂಡುಗಳನ್ನು ಹೊರ ತೆಗೆಯಲು ಬರುವುದಿಲ್ಲ ಎಂದರೆ ಸರಿಯಲ್ಲ . DBML ಗನ ಗಳಲ್ಲಿ ಮದ್ದು ಗುಂಡುಗಳಿಗೆ ಪ್ಯಾಕೇಜ್ ಮಾಡಿ ಲೋಡ ಮಾಡಿರುವುದರಿಂದ ನೀವು ಹೇಳುವಂತಹ ತಾಂತ್ರಿಕತೆ ಉಪಯೋಗಿಸಿ ಮದ್ದು ಗುಂಡು ಹೊರ ತೆಗೆಯಲು ಬರುವುದಿಲ್ಲ ಎಂದರೆ ನ್ಯಾಯಾಲಯದ ಮುಂದೆ ಇರುವ ಗನ DBML ಗನ ಅಲ್ಲ ಅದು SBML ಗನ ಆಗಿರುತ್ತದೆ . ನೀವು DBML ಗನ ಹಾಗೂ SBML ಗನ ಹೇಳುತ್ತಿದ್ದಿರಿ ಹಾಗಾದರೆ ನಿಮಗೆ ಮದ್ದು ಗುಂಡುಗಳನ್ನು ಹೊರ ತೆಗೆಯುವ ತಾಂತ್ರಿಕತೆ ಗೊತ್ತಿರುತ್ತದೊ ಇಲ್ಲವೊ ಎಂದರೆ ಗೊತ್ತಿಲ್ಲ . SBML ಗನ ವಾಗಲಿ DBML ಗನ ವಾಗಲಿ ಅವುಗಳನ್ನು ಅನ

ಲೊಡ್ ಮಾಡುವಂ ತಾಂತ್ರಿಕತೆ ಒಂದೇ ರೀತಿ ಯಾಗಿರುತ್ತದೆ ಎಂದರೆ ಅನ ಲೋಡ ಮಾಡುವ ತಾಂತ್ರಿಕ ಜ್ಞಾನ ನನಗೆ ಇರುವುದಿಲ್ಲ . ಜಿಲ್ಲಾ ಶಸಸ್ತ್ರ ಪಡೆಯವರು ಗನ ವನ್ನು ಅನ ಲೋಡ ಮಾಡಿ ಮದ್ದು ಗುಂಡುಗಳನ್ನು ಹೊರತೆಗೆದದ್ದು ಇಲ್ಲ ಹಾಗೂ ತಾಂತ್ರಿಕತೆ ಉಪಯೊಗಿಸಿ ಯಾವ ತಾಂತ್ರಿಕತೆಯಿಂದ ಮದ್ದು ಗುಂಡುಗಳನ್ನು ಹೊರ ತೆಗೆದಿರುತ್ತಾರೆ ಎಂದು ನೋಡಿದಂತಹ ವ್ಯಕ್ತಿಗಳು ನೀವು ಅಲ್ಲ ಎಂದರೆ ಸರಿಯಲ್ಲ . ಚಾಸಾ –1 ರವರು ನೀಡಿದ ಸುಳ್ಳು ದೂರಿನ ಆಧಾರದ ಮೇರೆಗೆ ಪೂರಕವಾಗಿ ಪ್ರಸವದ ವೇಳೆಯಲ್ಲಿ ಮೃತ ಪಟ್ಟ ಕಡವೆಯನ್ನು ಉಪಯೋಗಿಸಿಕೊಂಡು ಸುಳ್ಳಾಗಿ ಸೃಷ್ಟಿಸಿದ ಒಂದು ಪ್ರಕರಣಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ .

5. ಮಾನವನ ಉಗುರು ಗಳನ್ನು ಗಣನೆಗೆ ತೆಗೆದುಕೊಂಡರೆ ಸಾಮಾನ್ಯವಾಗಿ ಎಲ್ಲರ ಉಗುರು ಒಂದೇ ರೀತಿಯಾಗಿರುತ್ತದೆ ಎಂದರೆ ಸರಿಯಲ್ಲ . ತನಿಖಾಧಿಕಾರಿಗಳು ಆರೋಪಿತರ ಉಗುರಗಳನ್ನು ವಶಕ್ಕೆ ಪಡೆದುಕೊಂಡೆವು ಎಂದು ಹೇಳಿದಂತೆ ಅದನ್ನು ಶ್ಯಾಂಪಲ್ ಗಾಗಿ ತೆಗೆದುಕೊಂಡು ರಾಸಾಯನಿಕ ವಿಧಿ ವಿಜ್ಞಾನಕ್ಕೆ ಕಳುಹಿಸುವ ಸಮಯದಲ್ಲಿ ತನಿಖಾಧಿಕಾರಿಗಳು ಆ ಉಗುರಗಳಲ್ಲಿ ಮಾಂಸ ಹಾಗೂ ಅದರ ರಕ್ತ ದ ಕುರುಹುಗಳು ಆ ಉಗುರಗಳಲ್ಲಿ ಇದೆ ಎಂದು ತೋರಿಸಿರುತ್ತಾರಾ ಎಂದರೆ ಅದು ಕಣ್ಣಿಗೆ ಕಾಣದ ಮ್ಯಾನುಟ್ ಆಗಿರುವುದರಿಂದ ಅದನ್ನು ಪ್ರಯೋಗಾಲಯಕ್ಕೆ ಕಳುಹಿಸಬೇಕಾಗುತ್ತದೆ ಎಂದು ಹೇಳಿರುತ್ತಾರೆ . ಕಣ್ಣಿಗೆ ಕಾಣುವಂತಹ ಮಾಂಸದ ಚುರುಗಳಾಗಲಿ ಅಥವಾ ರಕ್ತ ವಾಗಲಿ ಆ ಉಗುರಗಳಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ . ದಿಃ07–12–2020 ರಂದು ತನಿಖಾಧಿಕಾರಿಗಳು ತನಿಖೆಯ ವೇಳೆಯಲ್ಲಿ ಜಪ್ತು ಪಡಿಸಿಕೊಂಡ ವಸ್ತುಗಳಿಂದ ಪರೀಕ್ಷಗಾಗಿ ಆಯ್ಕೆ ಮಾಡಿದ 7 ಅರ್ಟಿಕಲ್ ಗಳನ್ನು ಪಂಚರಾದ ಚಾಸಾ 2 ಮತುತ 3 ರ ಸಮಕ್ಷಮ ಮಾದರಿ ತೆಗೆದರು ಎಂದು ಹೇಳುವ ಸಮಯದಲ್ಲಿ ನೀವು ಇದ್ದೀರಾ ಎಂದರೆ ಹೌದು . ಅವುಗಳಲ್ಲಿ ಮೊದಲನೆಯದು ಗುಂಡು ತೆಗೆದ ಚರ್ಮ ಎಂದು ಹೇಳಿದ್ದೀರಿ . ಅದು ಎಷ್ಟು ಉದ್ದ ಎಷ್ಟು ಅಗಲ ಇತ್ತು ಎಂದು ಪಂಚನಾಮೆಯಲ್ಲಿ ಬರೆದಿರುತ್ತೀರಾ ಎಂದರೆ ಅದರ ಅಳತೆ ಬರೆದಿರುವುದಿಲ್ಲ . ಮಾದರಿ ಚರ್ಮ ದಿಂದ ಗುಂಡು ತಗಲಿದೆ ಎಂದು ಹೇಳಲಾದ ಚರ್ಮದ ಭಾಗ ತೆಗೆದ ಮೇಲೆ ಇನ್ನೆಷ್ಟು ಉದ್ದ ಮತ್ತು ಅಗಲದ ಮಾದರಿ ಚರ್ಮ ಉಳಿದುಕೊಂಡಿತ್ತು ಎಂದು ಪಂಚನಾಮೆ ಯಲ್ಲಿ ಬರೆದಿರುತ್ತೀರಾ ಎಂದರೆ ಪ್ರಯೋಗಾಲಕ್ಕೆ

ಕಳುಹಿಸಿ–ಕೊಡುವ ಶ್ಯಾಂಪಲ್ ಗಳನ್ನು ಮಾತ್ರ ಮಾದರಿಗಾಗಿ ತೆಗೆದುಕೊಳ್ಳುತ್ತೇವೆ . ಮಾದರಿ ಚರ್ಮ ಹಾಗೂ ಗುಂಡು ತಾಗಿದ ಚರ್ಮ ಯಾವುದು ಎಂದು ನಿಮಗೆ ಹೇಳಲು ಆಗುವುದಿಲ್ಲ ಎಂದರೆ ಅದನ್ನು ವೈದ್ಯಾಧಿಕಾರಿಗಳು ತನಿಖಾಧಿಕಾರಿಗಳ ಸಮಕ್ಷಮ ಮಾಡಿರುತ್ತಾರೆ . ಅವರಿಂದ ಪಡೆದುಕೊಂಡ ಶ್ಯಾಂಪಲ್ ವನ್ನು ಪ್ರಯೋಗಾಲಯಕ್ಕೆ ಕಳುಹಿಸಿ ಕೊಡುವ ಶ್ಯಾಂಪಲ್ ಗಳನ್ನು ಪಂಚರ ಸಮಕ್ಷಮ ಜಪ್ತು ಪಡಿಸಿಕೊಂಡು ಶೀಲು ಮಾಡಿ ಕಳುಹಿಸಿ ಕೊಡಲಾಗುತ್ತದೆ . ಗುಂಡು ತೆಗೆದ ಚರ್ಮದ ಉದ್ದ ಅಗಲ ಹಾಗೂ ಮಾದರಿ ಚರ್ಮದ ಉದ್ದ ಅಗಲ ಎಷ್ಟು ಇತ್ತು ಎಂದು ಪಂಚನಾಮೆ ಯಲ್ಲಿ ಬರೆದಿರುವುದಿಲ್ಲ . ಒಂಟಿ ನಳಿಕೆಯ ಬಂದೂಕಿನ ಉದ್ದ ಅಗಲ ಹಾಗೂ ಬಣ್ಣ ಹಾಗೂ ಅದರ ದಸ್ತಿನ ಬಣ್ಣ ಸದ್ರಿ ಗನಿನ ಸಂಪೂರ್ಣ ಪರಿಕರಗಳನ್ನು ಪಂಚನಾಮೆಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿ . 1 ರಿಂದ 3 ನೇ ಆರೋಪಿತರ ಉಗುರುಗಳನ್ನು ನನ್ನ ಸಮಕ್ಷಮದಲ್ಲಿ ತೆಗೆದದ್ದು ಇಲ್ಲ . ಹಾಗಾಗಿ 1 ನೇ , 2 ನೇ ಹಾಗೂ 3 ನೇ ಆರೋಪಿಯ ಉಗುರು ಗಳು ಯಾರದ್ದು ಎಂದು ನಿಮಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. 1 ರಿಂದ 3 ನೇ ಆರೋಪಿತರ ಉಗುರುಗಳು ಯಾರದ್ದು ಎಂದು ನ್ಯಾಯಾಲಯದ ಮುಂದೆ ನೀವು ಹೇಳಿರುತ್ತೀರಿ ಎಂದು ಅದನ್ನು ಯಾರ ಹೇಳಿಕೆಯ ಆಧಾರದಲ್ಲಿ ಹೇಳಿರುತ್ತೀರಿ ಎಂದರೆ ದಾಖಲೆ ಮತ್ತು ತನಿಖಾಧಿಕಾರಿ ದಾಖಲೆ ನೋಡಿ ಹೇಳಿರುತ್ತೇನೆ . ನನ್ನ ಸಮಕ್ಷಮ ದಲ್ಲಿ 1 ರಿಂದ 7 ಜಪ್ತಿ ಪಡಿಸಿಕೊಳ್ಳಲಾದ ಮುದ್ದೆಮಾಲುಗಳಲ್ಲಿ ಪ್ರಯೋಗಾಲಕ್ಕೆ ಕಳುಹಿಸಿಲ್ಲ ಎಂದರೆ ಸರಿಯಲ್ಲ . ಗನ ಶಾಪ್ ನಲ್ಲಿ ಸಿಗುವ ಗನ್ ಪೌಡರ ಮತ್ತು ಸೀಸದ ಗುಂಡುಗಳನ್ನು ದೂರಪಯೊಗ ಪಡಿಸಿಕೊಂಡು ಸುಳ್ಳು ಪ್ರಕರಣ ವನ್ನು ಆರೋಪಿತರ ಮೇಲೆ ನಿಮ್ಮ ಇಲಾಖೆಯವರು ಸೃಷ್ಠಿ ಮಾಡಿರುತ್ತಾರೆ ಎಂದರೆ ಸರಿಯಲ್ಲ . ಅದೇ ರೀತಿ ಈ ಬಗ್ಗೆ ಪಂಚನಾಮೆಯನ್ನು ನನ್ನ ಸಮಕ್ಷಮ ಮಾಡಲಾಯಿತು ಎಂದು ಸುಳ್ಳು ಹೇಳುತ್ತಿದಿದೇರಿ ಎಂದರೆ ಸರಿಯಲ್ಲ ಮತ್ತು ಆ ಪಂಚನಾಮೆಯನ್ನು ಆ ತನಿಖಾಧಿಕಾರಿಗೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಅದೇ ರೀತಿ ಆ ಪಂಚನಾಮೆಯನ್ನು ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲಾಗಿರುತ್ತದೆ ಎಂದು ನೀವು ಸುಳ್ಳು ಹೇಳಿರುತ್ತೀರಿ ಎಂದರೆ ಸರಿಯಲ್ಲ . ಒಂದು ವೇಳೆ ಆ ಪಂಚನಾಮೆಯನ್ನು ನೀವು ಪ್ರಯೋಗಾಲ್ಕಕ್ಕ ಕಳುಹಿಸಿದ್ದರೆ ಆ ಪಂಚನಾಮೆಯನ್ನು ನಿಮ್ಮ ಕಾರ್ಯಾಲಯಕ್ಕೆ ತರಿಸಿಕೊಂಡು ನ್ಯಾಯಾಲಯಕ್ಕೆ ಹಾಜರ

ಪಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿಯಲ್ಲ . ಗನವನ್ನು ಅನ ಲೊಡ್ ಮಾಡಿದ ಬಗ್ಗೆ- ಮಧ್ಯಾಹ್ಷ 12-30 ರಿಂದ 1-30 ರವರೆಗೆ ಪಂಚನಾಮೆ ಜರುಗಿಸಲಾಗಿತ್ತು ಎಂದು ನಾನು ಸುಳ್ಳು ಹೆಳುತ್ತಿದ್ದೇನೆ ಎಂದರೆ ಸರಿಯಲ್ಲ . ಆ ಬಗ್ಗೆ ಪೊಟೊ ತೆಗೆಯಲಾಗಿತ್ತು ಮತುತ ಪಂಚನಾಮೆ ಜರುಗಿಸಲಾಗಿತ್ತು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಸದ್ರಿ ಪೊಟೊ ವನ್ನು ಈ ಪ್ರರಕಣಕ್ಕೆ ಅನೂಕೂಲವಾಗುವಂತೆ ನನ್ನ ಮೇಲಾಧಿಕಾರಿಗಳು ಸೃಷ್ಟಿ ಮಾಡಿದ್ದು ಎಂದರೆ ಸರಿಯಲ್ಲ . ನ್ಯಾಯಾಲಯದ ಮುಂದೆ ಇರುವ ಮು ಮಾ 1 ರಿಂದ 9 ಕ್ಕೂ ಹಾಗೂ ಆರೋಪಿತರಿಗೂ ಯಾವುದೇ ಸಬಂದ ಇಲ್ಲ ಎಂದರೆ ಸರಿಯಲ್ಲ . ಅದೇ ರೀತಿ ಮೃತ ಪಟ್ಟಿದೆ ಎನ್ನಲಾದ ಕಡವೆ ಯ ಭ್ರೂಣ , ಚರ್ಮ , ಮಾಂಸ , 4 ಕಾಲುಗಳು ಹಾಗೂ ಕಡವೆಯ ತಲೆಗೂ ಮತ್ತು ಈ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂರದೆ ಸರಿಯಲ್ಲ . ಮೇಲೆ ಹೇಳಿದಂತಹ ಯಾವುದೇ ಘಟನೆ ಆರೋಪಿತರಿಂದ ಘಟಿಸಿದ್ದು ಇಲ್ಲ ಎಂದರೆ ಸರಿಯಲ್ಲ . ನಮ್ಮ ಇಲಾಖೆಯವರು ಅಂಕಿಸಂಖ್ಯೆಕೋಸ್ಕರ ಸೃಷ್ಟಿಸಿದ ಒಂದು ಸುಳ್ಳು ಕೇಸ್ ಗೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.